**ದಿನಾಂಕಃ 17-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು: 9 ನೇ ಪ್ರತಿವಾದಿ ಪರ ಶ್ರೀ ಎಂ.ಹೆಚ್ ವಕೀಲರಿಂದಃ**

ನಾನು 5 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತಿತ್ತು ಆದರೆ ಈಗ ಕಣ್ಣು ಕಾಣುವುದಿಲ್ಲ. ವಾದಿಯ ತಂದೆಯ ಹೆಸರು ಶರಣಪ್ಪ ಇರುತ್ತದೆ. ಸದರಿ ಶರಣಪ್ಪನಿಗೆ 9 ಜನ ಮಕ್ಕಳು ಇರುತ್ತಾರೆ. ವಾದಿಯ ತಂದೆ ಶರಣಪ್ಪ ತೀರಿಕೊಂಡಿರುತ್ತಾರೆ. ಸದರಿ ಶರಣಪ್ಪ ಯಾವ ವರ್ಷದಲ್ಲಿ ತೀರಿಕೊಂಡಿರುತ್ತಾರೆ ಅಂತ ನನಗೆ ಗೊತ್ತಿರುವುದಿಲ್ಲ.

2. ಶರಣಪ್ಪನ ಕುಟುಂಬಕ್ಕೆ ಒಟ್ಟು ಎಷ್ಟು ಆಸ್ತಿಗಳು ಇದ್ದಾವೆ ಅಂತ ನನಗೆ ಗೊತ್ತಿರುವುದಿಲ್ಲ. ಶರಣಪ್ಪ ತೀರಿಕೊಂಡ ನಂತರ ಮನೆಯ ಜವಬ್ದಾರಿಯನ್ನು 4 ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. 6 ಮತ್ತು 7 ಪ್ರತಿವಾದಿಯರ ಮದುವೆ ಯಾವಾಗ ಆಗಿರುತ್ತದೆ ಅಂತ ನನಗೆ ಗೊತ್ತಿರುವುದಿಲ್ಲ. ಅಂದಾಜು ಎಷ್ಟು ವರ್ಷಗಳ ಹಿಂದೆ ಮದುವೆಯಾಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. 6 ನೇ ಪ್ರತಿವಾದಿಗೆ ಈಗ 20 ವರ್ಷ ಇರಬಹುದು. 7 ನೇ ಪ್ರತಿವಾದಿಗೆ 18 ವರ್ಷ ಇರಬಹುದು. ಶರಣಪ್ಪ ಸುಮಾರು 16 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ಸದರಿಯವರ ಮದುವೆಯನ್ನು 4 ನೇ ಪ್ರತಿವಾದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. 7 ನೇ ಪ್ರತಿವಾದಿ ವಯಸ್ಸು 18 ವರ್ಷ ಇದೆ, 16 ವರ್ಷಗಳ ಹಿಂದೆ ಸದರಿಯವರಿಗೆ 20 ವರ್ಷ ಇರಬಹುದು ಎಂದು ನುಡಿಯುತ್ತಾರೆ.

3. ವಾದಿಯ ಕುಟುಂಬದಲ್ಲಿ ಅಥವಾ 4 ನೇ ಪ್ರತಿವಾದಿಯಾಗಲಿ ಅಥವಾ ಬೇರೆ ಯಾರೇ ಆಗಲಿ ಜಮೀನನ್ನು ಒತ್ತಿ ಇಟ್ಟು ಸಾಲಪಡೆದಿರುತ್ತಾರ ಅಂತ ಕೇಳಲು, ಸಾಕ್ಷಿಯು 4 ನೇ ಪ್ರತಿವಾದಿಯ ಜಮೀನನ್ನು ಒತ್ತಿ ಇಟ್ಟು ಸಾಲಪಡೆದಿರುತ್ತಾರೆ ಎಂದು ನುಡಿಯುತ್ತಾರೆ. 4 ನೇ ಪ್ರತಿವಾದಿಯು ಯಾರಕಡೆಯಿಂದ ಸಾಲ ಪಡೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಆದರೆ ಯಾರ ಕಡೆ ಒತ್ತಿಯಾಕಿರುತ್ತಾನೆ ಎಂದು ನಾನು ಕೇಳಿರುತ್ತೇನೆ ಎಂದು ನುಡಿಯುತ್ತಾರೆ.

4. ವಾದಿಯ ಮತ್ತು ಪ್ರತಿವಾದಿ ಕುಟುಂಬದಲ್ಲಿ 4 ಕರಾರು ಪತ್ರ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಪತ್ರಗಳ ಪೈಕಿ 1 ಒತ್ತಿಪತ್ರವಾಗಿರುವುದು ನನಗೆ

ಗೊತ್ತಿರುತ್ತದೆ, ಉಳಿದವುಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸಾಕ್ಷಿಗೆ ಕರಾರು ಪತ್ರಗಳಗೆ ಸಂಬಂಧಿಸಿದ ನಾಲ್ಕು ದಾಖಲೆಗಳನ್ನು ತೋರಿಸಿ ಕೇಳಲು ಸಾಕ್ಷಿಯು ನನಗೆ ಕಣ್ಣು ಕಾಣುವುದಿಲ್ಲ ಎಂದು ನುಡಿಯುತ್ತಾರೆ. ಮುಂದಿನ ದಿನಾಂಕದಂದು ಕನ್ನಡಕವನ್ನು ಬಂದು ಸಾಕ್ಷಿ ನುಡಿಯುತ್ತಿಯಾ ಅಂತ ನ್ಯಾಯಾಲಯವು ಕೇಳಲಾಗಿ ಸಾಕ್ಷಿಯು ಆಗುವುದಿಲ್ಲ ಎಂದು ನುಡಿಯುತ್ತಾರೆ.

5. ನನಗೆ ವಯಸ್ಸು 67-68 ಇರುಬಹುದು. ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಏನು ಬರೆದಿರುತ್ತಾರೆ ಅಂತ ನನಗೆ ನೆನಪಿರುವುದಿಲ್ಲ. 9 ನೇ ಪ್ರತಿವಾದಿಯ ತಂದೆಯ ಹೆಸರು ಹುಲಗಪ್ಪ ಇರುತ್ತದೆ. ಸದರಿ ಹುಲಗಪ್ಪ ಇತನು ಹೆಚ್ಚುವರಿ ದಿವಾನಿ ನ್ಯಾಯಾಲಯದಲ್ಲಿ ನನ್ನ ವಿರುದ್ದ ಕ್ರಿಮೀನಲ್ ಪ್ರಕರಣ ದಾಖಲಿಸಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ.

6. ಅದೇ ರೀತಿ 9 ನೇ ಪ್ರತಿವಾದಿಯು ನನ್ನ ಮತ್ತು ಒಟ್ಟು 12 ಜನರ ಮೇಲೆ ಶಾಶ್ವತ ನಿರ್ಬಂಧಕಾಜ್ಞೆ ಆದೇಶ ಕೋರಿ ಅಸಲು ದಾವಾ ನಂ.6/2024 ನೇದ್ದನು ದಾಖಲಿಸಿರುತ್ತಾನೆ ಎಂದರೆ ಸರಿಯಲ್ಲ. ಸದರಿ ಪ್ರಕರಣದಲ್ಲಿ ನಾನು 4 ನೇ ಪ್ರತಿವಾದಿ ಇರುತ್ತೇನೆ ಎಂದರೆ ಸರಿಯಲ್ಲ. ವಾದಿಯ ಕುಟುಂಬದ ಬಗ್ಗೆ, ಆಸ್ತಿಯ ಬಗ್ಗೆ ಮತ್ತು ಆರ್ಥಿಕ ಸ್ಥಿತಿಯ ಬಗ್ಗೆ ನನಗೆ ಯಾವುದೇ ಮಾಹಿತಿ ಇರದಿದ್ದರೂ ಸಹ 9 ನೇ ಪ್ರತಿವಾದಿ ತಂದೆಯ ದ್ವೇಷದಿಂದ ಮತ್ತು 9 ನೇ ಪ್ರತಿವಾದಿಯು ಸಿವಿಲ್ ಪ್ರಕರಣ ದಾಖಲಿಸಿದ್ದರಿಂದ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

7. ವಾದಿಯ ತಂದೆ ಶರಣಪ್ಪನಾಗಲಿ ಅಥವಾ ಆತನ ಹೆಂಡತಿ ಮಕ್ಕಳಾಗಿಲಿ ಯಾವುದೇ ಆಸ್ತಿ ಮಾರಾಟ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಶರಣಪ್ಪ ಮತ್ತು ಆತನ ಕುಟುಂಬದವರು ಶರಣಪ್ಪನ ಕುಟುಂಬದವರಿಗೆ ಒಟ್ಟು 3 ಆಸ್ತಿ ಮಾರಾಟ ಮಾಡಿದ್ದು ಗೊತ್ತಿದ್ದರು ಸಹ ಸುಳ್ಳು ಹೇಳತ್ತಿದ್ದೇನೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಯು ಕುಟುಂಬದ ಮುಖ್ಯಸ್ತನಾಗಿ ತನ್ನ ತಂಗಿಯ ಮದುವೆ ಮಾಡಿದ ಸಾಲಕ್ಕಾಗಿ 9 ನೇ ಪ್ರತಿವಾದಿ 1 ಆಸ್ತಿ ಮಾರಾಟ ಮಾಡಿದ್ದು, ಸದರಿ ಸಂಗತಿ ನನಗೆ ಗೊತ್ತಿದ್ದರು ಸಹಿತ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: 1 ರಿಂದ 8 ನೇ ಪ್ರತಿವಾದಿಯು ಪ್ರತಿವಾದಿ ಪತ್ರ ಸಲ್ಲಿಸದೇ ಇರುವುದರಿಂದ ಅವರ ವಿರುದ್ಧ ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆ: ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,

ಶೋರಾಪುರ.